**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>**

**ಶ್ರೀರಂಗಪಟ್ಟಣ.**

ಸಿ.ಸಿ.ಃ 228/2018

ಪಿ. ಡಬ್ಲ್ಯುಃ 04

ಸಿ. ಡಬ್ಲ್ಯುಃ 07

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಲೋಕೇಶ್ |
| ತಂದೆ/ಪತಿಯ ಹೆಸರು | ಃ | ಚಿಕ್ಕಣ್ಣ |
| ವಯಸ್ಸು | ಃ | 50 ವರ್ಷ |
| ವೃತ್ತಿ | ಃ | ವ್ಯಾಪಾರ |
| ವಾಸ | ಃ | ಪೇಪರ್ ಮಿಲ್ ಸರ್ಕಲ್, ಬೆಳಗೊಳ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 14.11.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ಸಹಿ ಮಾಡಬಲ್ಲೆ. ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದ್ದು ಅಮಾನತ್ತು ಪಂಚನಾಮೆಯನ್ನು ನಿಪಿ.7 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.7-ಎ ಎಂದು ಗುರುತಿಸಲಾಯಿತು.

ನಿಪಿ.7 ಕ್ಕೆ ನಾನು ಸಹಿ ಯಾವಾಗ ಮಾಡಿದ್ದೇನೆ ಎಂದು ನೆನಪಿಲ್ಲ. ಪೋಲೀಸರು ನಿಪಿ.7 ಕ್ಕೆ ನನ್ನ ಮನೆಯ ಹತ್ತಿರ ಸಹಿ ಪಡೆದಿದ್ದಾರೆ. ನಿಪಿ.7 ಕ್ಕೆ ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಆದರೆ ಪೋಲೀಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಇನ್ಯಾರು ನಿಪಿ.7 ಕ್ಕೆ ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

ದಿಃ 26.10.2018 ರಂದು ಪೋಲೀಸರು ಬೆಳಿಗ್ಗೆ 11.00-11.30 ಸಮಯದಲ್ಲಿ ಕೆ.ಆರ್.ಸಾಗರ ಪೋಲೀಸ ಠಾಣಾ ಆವರಣದಲ್ಲಿ ನನ್ನ ಮತ್ತು ಶಿವಕುಮಾರ ರವರ ಸಮಕ್ಷಮ ಕೆಎ-11-ಎಫ್-0077 ಬಸ್ ಹಾಗೂ ಕೆಎ-09-ಹೆಚ್ಇ-8370 ಮೋಟಾರ್ ಬೈಕ್ ಅನ್ನು

ಪಂಚನಾಮೆ ಕ್ರಮ ಜರುಗಿಸಿ ತಮ್ಮ ವಶಕ್ಕೆ ಪಡೆದರು ಮತ್ತು ಆ ಸಮಯದಲ್ಲಿ ನಿಪಿ.7 ಅಮಾನತ್ತು ಪಂಚನಾಮೆಯನ್ನು ಬರವಣಿಗೆ ಮಾಡಲಾಗಿದ್ದು ನಾನು ಮತ್ತು ಶಿವಕುಮಾರ್ ಸದರಿ ಪಂಚನಾಮೆಗೆ ಸಹಿ ಮಾಡಿದ್ದೇವೆ ಎಂದರೆ ಸುಳ್ಳು.

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ.7 ಮಹಜರ್ ಗೆ ನಾನು ಸಾಕ್ಷಿಯಾಗಿದ್ದರೂ ಕೂಡ ನನ್ನ ಸಮಕ್ಷಮ ಮಹಜರ್ ಮಾಡಿಲ್ಲವೆಂದು ಹಾಗೂ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.